


# ದೇವಾಲಯಗಳು ಮತ್ತು ನಾನು

ನನ್ನ ಯೌವನದ ದಿನಗಳಲ್ಲಿ ನಾನು ನನ್ನ ತಂದೆ ತಾಯಿಗಳು ನನ್ನಲ್ಲಿ ಮೂಡಿಸಿದ್ದ ಶ್ರದ್ಧಾಭಕ್ತಿಗಳೊಡನೆ ಅನೇಕ ದೇವಸ್ಥಾನಗಳಿಗೆ ಹೋಗಿದ್ದೆ. ಆದರೆ ಈಚಿನ ವರ್ಷಗಳಲ್ಲಿ ನಾನು ದೇವಸ್ಥಾನಗಳಿಗೆ ಹೋಗುತ್ತಿಲ್ಲ. ಅಸ್ಪೃಶ್ಯತೆಯನ್ನು ವಿರೋಧಿಸುವ ಕೆಲಸದಲ್ಲಿ ನಾನು ತೊಡಗಿದಾಗಿನಿಂದ, ಅಸ್ಪೃಶ್ಯನೆಂದು ಕರೆಯಲ್ಪಟ್ಟ ಪ್ರತಿಯೊಬ್ಬನಿಗೂ ದೇವಾಲಯಗಳು ಪ್ರವೇಶ ನೀಡದಿದ್ದಲ್ಲಿ, ನಾನು ಅವುಗಳಿಗೆ ಹೋಗುವುದನ್ನು ನಿಲ್ಲಿಸಿದ್ದೇನೆ. ಆದ್ದರಿಂದ ನಾನು ಇಂದು ಬೆಳಗ್ಗೆ ದೇವಸ್ಥಾನದಲ್ಲಿ ಕಂಡದ್ದು ಘೋಷಣೆಯ ತರುವಾಯ ದೇವಸ್ಥಾನಕ್ಕೆ ಹೋಗಿದ್ದ ಅಷ್ಟೊಂದು ಜನ ಅವರ್ಣ ಹಿಂದೂಗಳ ಮೇಲೆ ಮೂಡಿದ್ದ ನವನೂತನ ಭಾವವನ್ನೇ ನನ್ನಲ್ಲಿಯೂ ಮೂಡಿಸಿತು. ಕಲ್ಪನೆಯ ಮೂಲಕ ನನ್ನ ಮನಸ್ಸು ಕಲ್ಲು ಮತ್ತು ಲೋಹದ ಮೂಲಕ ದೇವಾಲಯಗಳು ದೇವರ ಸಂದೇಶವನ್ನು ತಿಳಿಸಲು ಪ್ರಾರಂಭಿಸಿದ ಪ್ರಾಚೀನ ಶತಮಾನಗಳ ಹಿಂದಕ್ಕೆ ಹೋಯಿತು. ಪ್ರತಿಯೊಂದು ವಿಗ್ರಹವನ್ನೂ ತನ್ನದೇ ಶುದ್ಧ ಹಿಂದಿಯಲ್ಲಿ ವಿವರಿಸುತ್ತಿದ್ದ ಪೂಜಾರಿಯು ಈ ವಿಗ್ರಹಗಳಲ್ಲಿ ಪ್ರತಿಯೊಂದೂ ದೇವರಾಗಿತ್ತು ಎನ್ನುವುದನ್ನು ನನಗೆ ತಿಳಿಸಲು ಇಚ್ಛಿಸಲಿಲ್ಲ ಎಂಬುದನ್ನು ನಾನು ಬಹಳ ಸ್ಪಷ್ಟವಾಗಿ ಕಂಡುಕೊಂಡೆ.

(ತಿರುವಾಂಕೂರು ದೇವಾಲಯ ಪ್ರವೇಶ ಘೋಷಣೆಯ ಸಮಾರಂಭಕ್ಕೆ ಸಂಬಂಧಿಸಿದಂತೆ ಕೇರಳದ ತಿರುವನಂತಪುರದಲ್ಲಿ ಮಾಡಿದ ಭಾಷಣದಿಂದ)